ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಇದನ್ನು ಭದ್ರಾವತಿ ಸಿಮೆಂಟ್ ಕಾರ್ಖಾನೆಯ ಅಂಗವಾಗಿ ಒಂದು ಕಾರ್ಖಾನೆ ಮಾಡುವ ಅಭಿಪ್ರಾಯವಿದೆಯೇ ಅಥವಾ ಇದಕ್ಕೆ ಬೇರೆ ಒಂದು ಜಾಯಿಂಟ್ ಸ್ಟಾಕ್ ಕಂಪನಿ ಮಾಡಬೇಕೆಂದು ಇದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಮೊದಲು ಕಾರ್ಖಾನೆ ಎಲ್ಲಿ ಸ್ಥಾಪನೆ ಮಾಡಬೇಕೆಂಬುದು ನಿರ್ಧರವಾದ ಮೇಲೆ ಭದ್ರಾವತಿ ಕಾರ್ಖಾನೆಯ ಅಂಗವಾಗಿ ಮಾಡಬೇಕೇ ಅಥವಾ ಇನ್ಯಾರಿಗಾದರೂ ಕೊಡಬೇಕೇ ಎನ್ನುವುದನ್ನು ಯೋಚನೆಮಾಡಬಹುದು.

ಶ್ರೀ ಜಿ. ಬಸಪ್ಪ.—ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಾರ್ಖಾನೆಯ ವಿಚಾರವನ್ನು ಸೇರಿಸಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೇರಿಸಿಲ್ಲ.

ಶ್ರೀ ಜಿ. ಬಸಪ್ಪ.—ಸೇರಿಸದೇ ಹೋದ ಮೇಲೆ ಯಾವ ರೀತಿ ಪ್ರಾರಂಭಿಸುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಪ್ರೈವೇಟ್ ಸೆಕ್ಟರ್‌ನಲ್ಲಿ ಸೇರುವುದರಿಂದ ಪಬ್ಲಿಕ್ ಸೆಕ್ಟರ್‌ನಲ್ಲಿ ಸೇರಿಸಿಲ್ಲ, ಅಷ್ಟೆ.

ಶ್ರೀ ಜಿ. ಬಸಪ್ಪ.—ಈ ಕಾರ್ಖಾನೆಯನ್ನು ಸ್ಥಾಪನೆಮಾಡಲಕ್ಕೆ ಸರ್ಕಾರದ ಸಹಾಯ ನೀಡಲು ಅವಕಾಶ ಮಾಡಿಕೊಂಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವಶ್ಯಕತೆ ಇದ್ದರೆ ಸರ್ಕಾರದವರು ಸಹಾಯಕ್ಕೆ ಬರುವುದರಲ್ಲಿ ಯಾವ ಅಭ್ಯಂತರವೂ ಇಲ್ಲ.

Pick-up Channel near Kiragunda Village, Nanjangud Taluk.

Q.—401. **Sri M. LINGANNA** (Nanjangud).—

Will the Government be pleased to state :—

(*a*) whether an estimate is prepared for the construction of a pick-up canal near Kiragunda Village, Nanjangud Taluk ;

(*b*) since how many years back it is done ;

(*c*) what the total cost of the estimate is ;

(*d*) what the total acreage that would be brought under the plough by this project is ;

(*e*) when the work will be taken up ?

A.—**Sri H. M. CHANNABASAPPA** (Minister for Industries).—

(*a*) No.

(*b*), (*c*), (*d*) and (*e*) Do not arise.

ಶ್ರೀ ಎಂ. ಲಿಂಗಣ್ಣ.—ಇದಲ್ಲದೆ ಬೇರೆ ಇನ್ನಾವುದಾದರೂ ನೀರಾವರಿ ಯೋಜನೆ ಇದೆಯೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಅಣೆಕಟ್ಟು ಎಂದು ಕೇಳಿದ್ದೀರಿ, ಕೆರೆ ಅಲ್ಲ. ಕೆರೆ ವಿಷಯದಲ್ಲಿ ಬೇಕಾದರೆ ಅಂಕಿಅಂಶ ತಿಳಿಸುತ್ತೇನೆ, ಪ್ರಶ್ನೆ ಕೇಳಿ.

Sri M. LINGANNA.—When was the estimate prepared and what is the total cost of the estimate ?

Sri H. M. CHANNABASAPPA.—The total cost of the estimate is Rs. 1.11 lakhs. The estimate is now pending with the Executive Engineer and is under scrutiny.

Sri M. LINGANNA.—What is the total acreage that will be irrigated ?

Sri H. M. CHANNABASAPPA.—About 88 acres will be irrigated.

Sri M. LINGANNA.—Will it be sanctioned early ?

Sri H. M. CHANNABASAPPA.—That depends upon so many other considerations. Anyway, the Government will examine and if it satisfies the condition we will certainly sanction.

Sri M. LINGANNA.—What will be the return ?

Sri H. M. CHANNABASAPPA.—The return is said to be about 3% and the entire thing has not been finalised. Anyway after the finalised figures come to Government, if the conditions are satisfied, it will be sanctioned.

ಶ್ರೀ ಯು. ಎಂ. ಮಾದಪ್ಪ.—ರೆಮ್ಯುನೆರೇಟಿವ್ ಆಗದೆ ಇರುವುದನ್ನೂ ತಿಳಿದುಕೊಂಡು pick-up ಹಾಕುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—Remunerative ಆಗುವುದಿಲ್ಲವೆಂದು ಇಪ್ಪೊತ್ತೇ ತೀರ್ಮಾನಕ್ಕೆ ಬರಬೇಕಾಗಿಲ್ಲ.

Sales-tax on Charaka Silk.

Q.—353. **Sri M. RAJASEKHARA MURTHY** (Yelandur).—

Will the Government be pleased to state :—

(*a*) whether they are collecting Sales-tax on the sale of Charaka silk from the silk reelers ;

(*b*) whether the silk reelers have submitted any memorandum to the Government for the abolition of the Sales-tax ?

A.—**Sri H. M. CHANNABASAPPA** (Minister for Industries).—

(*a*) Yes.

(*b*) The Silk Reelers' Association, Channapatna, has represented to Government for exempting cocoons from Sales-tax, etc.

Sri M. RAJASEKHARA MURTHY.—What action has been taken by the Government regarding the exemption of charaka silk and cocoon from the operation of Sales Tax Act ?

Sri H. M. CHANNABASAPPA.—Salestax is leviable on dealers in charaka silk who do not take licence under section 5 of the Act.

Neralagunte Tank in Challakere Taluk (Repairs).

Q.—321. **Sri V. MASIYAPPA** (Hiriyur).—

Will the Government be pleased to state :—

(*a*) whether the people of Neralagunte in Challakere Taluk have given applications to Government to repair the tank of their village ;

(*b*) the extent of atchkat under the tank :

(*c*) whether it has come to their notice that it would have breached during the last rainy season but for the efforts of the villagers ;

(*d*) the action taken by them on the representation ¿

A.—**Sri H. M. CHANNABASAPPA** (Minister for Industries).—

(*a*) No.

(*b*) No permanent atchkat is fixed. Water supply is being made to an average extent of 118 acres on temporary Nirsardi basis.

(*c*) No.

(*d*) Does not arise.

ಶ್ರೀ ವಿ. ಮಸಿಯಪ್ಪ.—(ಎ) ಭಾಗಕ್ಕೆ ಗ್ರಾಮಸ್ಥರು ಅರ್ಜಿ ಕೊಟ್ಟಿಲ್ಲವೆಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಸರ್ಕಾರದವರಿಗೂ, ಸಂಬಂಧ ಪಟ್ಟ ಮಂತ್ರಿಗಳಿಗೂ, ಮತ್ತು ಇಲಾಖಾಧಿಕಾರಿಗಳಿಗೂ ನೇರಳಗುಂಜೆ ಗ್ರಾಮಸ್ಥರು ಅರ್ಜಿಗಳನ್ನು ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸಿಲ್ಲವೆ ?

***Sri H. M. CHANNABASAPPA.**—The answer is that the Government has not been addressed and Government have not received these applications. But information is disclosed that they have filed an application before the Amildar on 8th October 1955 and 21st November 1955.

ಶ್ರೀ ವಿ. ಮಸಿಯಪ್ಪ.—ಆ ಅರ್ಜಿಯಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಅರ್ಜಿ ಬಂದ ಮೇಲೆ ಅಸಿಸ್ಟೆಂಟ್ ಇಂಜನಿಯರು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿದ್ದಾರೆ.

ಶ್ರೀ ವಿ. ಮಸಿಯಪ್ಪ.—ಪರಿಶೀಲನೆಯಿಂದ ಹೊರ ಪಟ್ಟಿರುವ ಅಂಶಗಳೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಕೆರೆ ಪೂರ್ಣವಾಗಿ ಶಿಥಿಲವಾಗಿದೆ ಎಂದು ತಿಳಿದು ಬಂದಿದೆ.

ಶ್ರೀ ವಿ. ಮಸಿಯಪ್ಪ.—ಆದಷ್ಟು ಜಾಗ್ರತೆ ಆ ಕೆರೆಯನ್ನು ದುರಸ್ತು ಪಡಿಸಿ ಅದರಿಂದ ಆ ಊರಿನ ರೈತರಿಗೆ ಶಾಶ್ವತವಾಗಿ ಅನುಕೂಲವಾಗುವಂತೆ ಏರ್ಪಾಡು ಮಾಡುವ ವಿಷಯವನ್ನು ಆಲೋಚನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಾಗಲೇ ಒಂದು ಅಂದಾಜು ಮಂಜೂರಾಗಿದೆ. ಈ ಕೆಲಸ ತೆಗೆದುಕೊಂಡಿದ್ದಾರೆ. ಇನ್ನೂ 25 ಸಾವಿರ ರೂಪಾಯಿಗಳ ಅಂದಾಜಿನಲ್ಲಿ ಈ ಕೆರೆಯನ್ನು ದುರಸ್ತು ಮಾಡತಕ್ಕ ವಿಷಯವನ್ನು ಸರ್ಕಾರ ಯೋಚನೆ ಮಾಡುತ್ತಿದೆ.

Kanakuppe Tank in Tumkur Taluk (Repairs).

Q.—495. **Sri T. N. MUDALAGIRI GOWDA** (Kunigal).—

Will the Government be pleased to state :—

(*a*) whether the representative of Kunigal constituency has not written letters to the Government and the Chief Engineer stating that the four tanks, *viz.*, Kanakuppe tank, Nidavalalu tank, Hunasegere tank, Ariyar tank of Tumkur Taluk are in a dangerous condition and that suitable action is to be taken thereon ;

(*b*) whether any of the officers either the Executive Engineer or the Assistant Engineer, has gone and inspected these tanks ;

(*c*) whether it has come to their notice that the raiyats have repaired the breach at one place of Hunasegere tank and thus made arrangements for temporary impounding of water in the tank ;

(*d*) the nature of action taken with regard to these tanks ?